Regd No. M 299 ॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥ ಬಿಡಿ ಸಂಚಿಕೆ ೩ ಪೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 (ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿತವಾದುದು) ವರ್ಷಕ್ಕೆ ರೂ. 1—10—0
ಸ್ಥಳಕ್ಕೆ ಪ್ರತಿ ಬುಧವಾರ ಪ್ರಕಟಿಸಲ್ಪಡುವದು ಪರಸ್ಥಳಕ್ಕೆ

ಸಂಪುಟ 19] ಮೈಸೂರು. ಬುಧವಾರ 1 ನೆ ಏಪ್ರಿಲ್ 1936 [ಸಂಚಿಕೆ 29

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿಕ್ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೆಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತರ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಬಂದಾವರ್ತಿಪರಿಕ್ಷಿಸಿ ನೋಡಬೇಕಾದ್ದು. ಟಿಕ್ 1 ಕ್ಕೆ 5 ಆಣೆ.

[ಸರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಮಣ್ಣು ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್
Manufg Chemists Druggists & Physician

ಮಳವಳ್ಳಿ ಏಜೆಂಟರು :
ಮಿ| ಜಿ. ಎಸ್. ವೆಂಕಟರಾವ್

ಅಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Season Deposits

Not exceeding Rs. 25,000 and falling below Rs. 500 from any one individual are received at Head Office and Branches of the Quilon Bank, Limited, from 15 th March to 15 th May, 1936, maturing from June to August at 3½ per cent interest per Annum.

Remittances received at par at all Branches and Agencies.

The Quilon Bank

(Incorporated in Travancore, 1919)

Subscribe for

&

Advertise in

The

Progressive

MYSORE

ಗುಲಿಸ್ತಾನ್

(ಕಾಪಿರೈಟ್)

ರಾಜನೀತಿ

೧೭

ನಾನು ಭಕ್ತಿಯುತವಾದ ಉತ್ತಮ ನಡತೆಯಿಂದಲೂ, ಸರಳತೆಯಿಂದ ಶಿಕ್ಷಿತವಾದ ಮನಸ್ಸಿನಿಂದಲೂ ಕೂಡಿದ ಒಂದು ಸತ್ಸಮಾಜದವರ ಗೆಳೆಯನಾಗಿದ್ದೆನು. ಒಬ್ಬ ಪ್ರಸಿದ್ಧ ರಾಜಕುಮಾರನು ಈ ಸಮಾಜದ ಘನತೆಯ ವಿಚಾರದಲ್ಲಿ ಬಹಳ ಗೌರವವಾದ ಅಭಿಪ್ರಾಯವನ್ನು ಇಟ್ಟುಕೊಂಡು, ಒಂದು ಮಾನ್ಯವನ್ನು ಅವರಿಗೆ ಕೊಟ್ಟಿದ್ದನು. (ಪ್ರಾಯಶಃ) ಈ ಪಂಗಡದವರಲ್ಲೊಬ್ಬನು, ಸಾಧುಗಳಿಗೆ ಯೋಗ್ಯವಲ್ಲದ ಕಾರ್ಯವೊಂದನ್ನು ಮಾಡಿದನು. ಇದರಿಂದ ಆ ಶ್ರೀಮಂತನಿಗೆ ಅವರಲ್ಲಿದ್ದ ಸದಭಿಪ್ರಾಯವು ಒದಲಾಯಿಸಿತು ಮತ್ತು ಅವರಿಗೆ ದೊರೆಯುತ್ತಿದ್ದ ಸಹಾಯವು ತಪ್ಪಿಸಲ್ಪಟ್ಟಿತು. ನಾನು ಹೇಗಾದರೂ ಮಾಡಿ ನನ್ನ ಗೆಳೆಯರ ಸಂರಕ್ಷಣಾಸಾಧನೆಯನ್ನು ಪುನರುಜ್ಜೀವನ ಮಾಡಬೇಕೆಂಬ ಆಶೆಯಿಂದ ಆ ರಾಜಕುಮಾರನನ್ನು ಕಾಣಲು ಪ್ರಯತ್ನಿಸಿದೆನು ದ್ವಾರಪಾಲಕರು ಒಳಗೆ ಪ್ರವೇಶಿಸಲು ನನಗೆ ಅವಕಾಶಕೊಡದೆ, ಒರಟುತನದಿಂದ ನನ್ನನ್ನು ಹಿಂದಟ್ಟಿದರು. ನಿರಾಸಾಧ್ಯವಾದ ಸಂಜ್ಞೆಯನ್ನುಂಟುಮಾಡುವ ಆಶ್ರಯವನ್ನು ಪಡೆಯುವರೆಗೂ ದೊರೆಯ ಮಂತ್ರಿಯು ಅಥವಾ ಯಾವನೋ ಒಬ್ಬ ಶ್ರೀಮಂತರ ಮನೆಯ ಬಾಗಿಲಿಗೆ ಹೋಗಬೇಡ; ಏಕೆಂದರೆ, ಭಿಕ್ಷುಕನನ್ನು ಕಡೆಗೊಡನೆಯೇ, ಅತನ ನಾಯಿಯು ಅಂತಹ ವಸ್ತ್ರದ ಕೊನೆಯನ್ನು, ದ್ವಾರಪಾಲಕನು ಕೂಲಿಯನ್ನು ಹಿಡಿದು ಹೊರಗೆ ಹಾಕಿದವು" ಎಂದು ಚತುರನು ಹೇಳಿದುದನ್ನು ಸ್ಥಿರಪಡಿಸತಕ್ಕ ದೃಷ್ಟಾಂತವಿದೆಂದು ತಿಳಿದು ಅತನನ್ನು ಕ್ಷಮಿಸಿದೆನು.

ಶ್ರೀಮಂತನ ಪ್ರಿಯ ಅನುಚರರು ನನ್ನ ಪರಿಸ್ಥಿತಿಯನ್ನು ತಿಳಿದು, ನನ್ನನ್ನು ಅತನಲ್ಲಿಗೆ ಮರ್ಯಾದೆಯಿಂದ ಕರೆದುಕೊಂಡು ಹೋಗಿ ಕಳಿತುಕೊಳ್ಳಲು ಉಚ್ಚಾಸನವನ್ನಿತ್ತರು. ಆದರೆ ನಾನು ನಮ್ರತೆಯಿಂದ ನಿಮ್ನಾಸನದಲ್ಲಿ ಕುಳಿತ ಕೊಂಡು "ದೀನರ ಗುಲಾಮನಾದ ನಾನು ಸೇವಕರ ಪಂಗ್ತಿಯಲ್ಲಿ ಕುಳಿತುಕೊಳ್ಳಲು ಅಪ್ಪಣೆಯನ್ನು ಕೊಡಬೇಕು" ಎಂದು ಹೇಳಿದೆನು—ಅದಕ್ಕೆ ಆ ದೊಡ್ಡ ಮನುಷ್ಯನು "ಓ ದೇವಾ! ಪರಮಾತ್ಮ!! ಇಂತಹ ಮಾತಿಗೆ ಕಾರಣವೇನು? ನಿನಗೆ ನನ್ನ ಚಕ್ಷುಸ್ತಾರೆಯಮೇಲೆ ಕುಳಿತುಕೊಳ್ಳಲು ಸಾಧ್ಯವಿದ್ದರೂ ನಿನ್ನ ಅಂತಹ ವಿಶೇಷಗಳನ್ನು ಬಯಸುವಷ್ಟು ನೀನು ಪ್ರಯೋಜಕನಾಗಿರವೆ" ಎಂದು ಹೇಳಿದನು.

ನಾನು ಕುಳಿತ ಕೊಂಡನಂತರ ವಿವಿಧ ವಿಚಾರಗಳನ್ನು ಚರ್ಚಿಸುತ್ತಾ, ಕಡೆಗೆ ನನ್ನ ಸ್ನೇಹಿತರು ಅವಿವೇಕವನ್ನು ಕುರಿತು ಮಾತನಾಡಲುಪಕ್ರಮಿಸಿ, "ಹಿಂದೆ ಮಹೌದಾರ್ಯವನ್ನು ತೋರಿಸಿದ ಮಹಾಸ್ವಾಮಿಗಳ ದೃಷ್ಟಿಯಲ್ಲಿ ಈ ಬಡಸೇವಕನು ಇಷ್ಟು ನಿಕೃಷ್ಟವಾಗಲು ಅತನು ಮಾಡಿದ ಅಪರಾಧವೇನು? ನಮ್ಮ ನ್ಯೂನಾತಿರಿಕ್ತಗಳನ್ನು ಕಂಡೂ ತನ್ನ ಉದಾರ ಆಶ್ರಯವನ್ನು ಅನವರತವೂ ದಯಪಾಲಿಸುವ ಗಾಂಭೀರ್ಯ ಮತ್ತು ಸೌಜನ್ಯ ಸಂಪೂರ್ಣತೆಯು ಪರಮಾತ್ಮನೊಬ್ಬನಲ್ಲಿ ಮಾತ್ರ ಇರುವುದು" ಎಂದು ನಾನು ಹೇಳಿದೆನು. ಅತನು ಈ ಮಾತನ್ನು ಕೇಳಿದೊಡನೆ ಅದು ಸರ್ವಜ್ಞತೆಯನ್ನು ಅನುಮೋದಿಸಿದನು ಮತ್ತು ನನ್ನ ಸ್ನೇಹಿತರಿಗೆ ಧನ ಸಹಾಯವನ್ನು ಮೊದಲಿನಂತೆ ಮಾಡಲೂ ಮತ್ತೂ ಹಿಂದಿನ ಬಾಕಿಯನ್ನೆಲ್ಲಾ ಕೊಡಲೂ ಆಜ್ಞಾಪಿಸಿದನು. ನಾನು ಅತನ ಔದಾರ್ಯಕ್ಕೆ ವಂದಿಸಿ, ಸಾಷ್ಟಾಂಗ ನಮಸ್ಕಾರ ಮಾಡಿ ನನ್ನ ದಿಟ್ಟತನಕ್ಕೆ ಕ್ಷಮೆಯನ್ನು ಬೇಡಿದೆನು. ಆತನ ಆಜ್ಞಾಪಿಪಡೆದು ಹೊರಡುವುದಕ್ಕೆ ಮುಂಚೆ "ಮೆಕ್ಕಾದಲ್ಲಿರುವ ಕಾಬಾದ ದೇವಾಲಯವು ಮುಖ್ಯವಾದುದರಿಂದ, ಬಹುದೂರ ದೇಶಗಳಿಂದ ಯಾತ್ರಿಕರು ದರ್ಶನಾರ್ಥವಾಗಿ ಅಲ್ಲಿಗೆ ಆತರದಿಂದ ಬರುವರು. ಅಂತಹ ನಮ್ಮಗಳ ಮೇಲೆ ನೀನು ಸಹಾನುಶೀಲತೆಯನ್ನು ತೋರುವುದು ನಿನಗೆ ಯೋಗ್ಯವು. ಏಕೆಂದರೆ, ಹಣ್ಣುಗಳನ್ನು ಬಿಡದ ಮರಕ್ಕೆ ಕಲ್ಲನಾರೂ ಎಸೆಯುವುದಿಲ್ಲ" ಎಂದು ಸೂಚಿಸಿದೆನು.

[ಮುಂದುವರಿಯುವುದು.

ಸುಖವಾಗಿ ಜೀವಿಸಲೆಳಸುವರು ಗಮನದಲ್ಲಿಡಬೇಕಾದ ವಿಷಯಗಳು ಯಾವುವೆಂದರೆ —

1 ಯಾರು ಏನು ಬೇಕಾದರೂ ಅಂದುಕೊಳ್ಳಲಿ, ತನ್ನ ರೂಪವು ತನಗೆ ಚೆನ್ನಾಗಿದೆಯೆಂದೇ ಭಾವಿಸಬೇಕು.

2 ತಾನು ರೋಗಿಯಾಗಿರುವೆನೆಂದೂ, ಬಲಹೀನನಾಗಿರುವೆನೆಂದೂ ಚಿಂತಿಸುತ್ತಿರಕೂಡದು.

3 ಧೈರ್ಯದಿಂದಿರಬೇಕು.

4 ಮುಖಂಡರಿಲ್ಲದೆಡೆಯಲ್ಲಿ ತಾನು ಜವಾಬ್ದಾರಿಯನ್ನು ವಹಿಸಬೇಕು. ಮುಖಂಡರಿರುವ ಕಡೆಯಲ್ಲಿ ಅವರು ಹೇಳಿದಂತೆ ಕೆಲಸಮಾಡಬೇಕು.

5 ಮುಂದೆ ಏನಾಗುವದೆಂಬ ವಿಚಾರದಲ್ಲಿ ಚಿಂತಿಸುತ್ತಿರಕೂಡದು.

6 ಎಲ್ಲಾ ಸದಭಿಪ್ರಾಯಗಳೂ ಒರುತ್ತು ತನ್ನ ಮೇಲ್ಮೆಗಾಗಿಯೇ ಎಂದು ಭಾವವನ್ನುಳ್ಳವನಾಗಿರಬೇಕು.

———

ಆಯಾಸವನ್ನು ಹೋಗಲಾಡಿಸಲು—

1 ಟೀಯನ್ನು ಕುಡಿಯುವರು.
2 ಕಾಫಿ ,,
3 ಮದ್ಯ ,,

ಇವುಗಳ ಪ್ರತಿಯಾಗಿ,
ಅದೇ ಗುಣವನ್ನು ಪಡೆಯಲು

1 ಕಾಲುಗಳನ್ನು ಸ್ವಲ್ಪ ಮೇಲು ಭಾಗಮಾಡಿ ಕಾಲು ಘಂಟೆಕಾಲ ಕುಳಿತುಕೊಳ್ಳಬಹುದು.
2 ಬಿಸಿಬಿಸಿ ನೀರಿನ ಸ್ನಾನ
3 ಶೀತಜಲಸ್ನಾನ
4 ಬೂರಾಸಕ್ಕರೆ ಅಥವಾ ಬೆಲ್ಲದಿಂದ ಕೂಡಿದ ಪದಾರ್ಥಗಳ ಭಕ್ಷಣೆ.

ಮೇಲ್ಕಂಡವುಗಳಲ್ಲಿ ಯಾವುದನ್ನಾದರೂ ಮಾಡಬಹುದು. (೦)

ವಿಚಾರತರಂಗ

ಹೇ ಪರಮಾತ್ಮ! ನೀನು ಸದಾ ನನ್ನ ಸವಿಾಪವರ್ತಿಯಾಗಿರುವಾಗ ನಾನು ನಿನ್ನನ್ನು ಕರೆಯುವದೆಂತು? ಆಪ್ತವಿತ್ರನೇ! ನಿನ್ನನ್ನು ಹೊಗಳುವದು ಅಥವಾ ಸ್ತುತಿರುವುದೆಂತು? ಸಕಲವನ್ನೂ ಕೊಡುವ ನಿನಗೆ ನಾನು ಏನನ್ನು ಅರ್ಪಿಸಬಲ್ಲೆ? ಹೇ ಪರೇಶಾ! ಈ ಲೋಕತ್ರಯಗಳಲ್ಲಿ ನಿನ್ನ ಸಮಾನರು ಯಾರಿರುವರು?

* *

ಸ್ವಾಮಿ ವಿವೇಕಾನಂದರಿಗೆ ಭಾರತ ದೇಶದ ಮೇಲೆ ಪ್ರೇಮವು ಎಷ್ಟು ಹೆಚ್ಚಾಗಿತ್ತೆಂದರೆ, ಅವರು ವಿದೇಶಗಳಿಂದ ಕೊಲಂಬೋ ಮೂಲಕ ಪ್ರಯಾಣ ಮಾಡಿ ರಾಮೇಶ್ವರಕ್ಕೆ ಬಂದೊಡನೆಯೇ ಅಲ್ಲಿಯ ಮರಳಿನಲ್ಲಿ ಹೊರಳಾಡಿ ಆನಂದಪಟ್ಟರಂತೆ. ದೇಶ ವಾತ್ಸಲ್ಯವೆಂದರೆ ಹೀಗಿರಬೇಕು.

೦ ೦

ದೇಶಕ್ಕೆ ಕ್ಷಾಮವು ಬಂದಾಗ ಮೌರ್ಯ ಕಾಲದಲ್ಲಿ ಜನಗಳಿಗೆ ಧನವನ್ನೂ ಧಾನ್ಯವನ್ನೂ ಹಂಚುತ್ತಿದ್ದರೆಂದೂ, ಬಡ್ಡಿಯಿಲ್ಲದೆ ಅದನ್ನು ಸುಭಿಕ್ಷ ಕಾಲದಲ್ಲಿ ವಾಪಸ್ಸು ಕೊಡಬೇಕಾಗಿತ್ತೆಂದೂ ತಿಳಿದು ಬಂದಿದೆ.

೦ ೦

ಇಡೀ ಪ್ರಪಂಚದ ೫ನೇ ೧ ಭಾಗದ ಜನರು ಇಂಡಿಯಾ ದೇಶದಲ್ಲಿರುವರು. ಈಗಿನ ಹಿಂದೂ ದೇಶದ ಜನಸಂಖ್ಯೆ ೩೫೨,೯೮೬,೮೭೬. ಇಂಡಿಯಾ ದೇಶದಲ್ಲಿಯ ಪಟ್ಟಣಗಳಲ್ಲಿ ಜನಸ್ತೋಮವಾಗಿರುವದು ಕಲ್ಕತ್ತಾ. ಅಲ್ಲಿಯ ಜನಸಂಖ್ಯೆ ಈಗ ೧,೪೧೯,೩೩೧; ಅದೇ ಮುಂಬೈನಲ್ಲಿ ೧,೧೫೫,೮೫೧ ಮಂದಿ ಇರುವರು. ಮದ್ರಾಸಿನಲ್ಲಿ ಇನ್ನೂ ಕಡಮೆ ಅಂದರೆ, ೭೪೭,೨೨೮.

೦ ೦

ಇಂಡಿಯಾ ದೇಶದಲ್ಲಿ ಒಟ್ಟು ಹಿಂದೂಗಳ ಸಂಖ್ಯೆ ೨೩೮,೩೫೦,೯೧೨; ಮುಸ್ಲಿಮರ ಸಂಖ್ಯೆ ೭೭,೭೪೩,೯೨೮; ಕ್ರಿಶ್ಚಿಯನ್ನರ ಸಂಖ್ಯೆ ೫,೯೬೧,೭೯೪; ಪಾರ್ಸಿಕರ ಸಂಖ್ಯೆ ೪೪,೪೪೦,೪೪೨.

೦ ೦

ಇಂಡಿಯಾದ ಎಲ್ಲಾ ರೈಲುಗಳಲ್ಲಿಯೂ ವರ್ಷಂಪ್ರತಿ ಪ್ರಯಾಣ ಮಾಡುವವರ ಸಂಖ್ಯೆ ೬೨೩ ಮಿಲಿಯದಷ್ಟು. ಇಂಡಿಯಾದಲ್ಲಿರುವ ಹಿಂದೂ ಸೈನಿಕರ ಸಂಖ್ಯೆ ೧॥ ಲಕ್ಷ; ಆಂಗ್ಲೇಯ ಸೈನಿಕರ ಸಂಖ್ಯೆ ೬೦ ಸಾವಿರ.

೦ ೦

ಶಂಕರಾಚಾರ್ಯರಿಗಿದ್ದಂತಹ ಕುಶಾಗ್ರಬುದ್ಧಿ, ಚೈತನ್ಯನಿಗಿದ್ದಂತಹ ಪ್ರೇಮ-ಪೂರಿತ ಹೃದಯ ಈ ಎರಡೂ ಇರುವವರೇ ಪ್ರಾಕ್ಪಶ್ಚಿಮ ಸಮ್ಮೇಳನಕ್ಕೆ ಮಾರ್ಗದರ್ಶಿಗಳಾಗುವಂಥವರು. ಶ್ರೀ ರಾಮಕೃಷ್ಣ ಪರಮಹಂಸರು ಅಂತಹ ಮಹನೀಯರಲ್ಲೊಬ್ಬರು.

೦ ೦

ಸನಾತನ ಹಿಂದೂಮತಕ್ಕಾಗಿ ಸ್ವಲ್ಪ ದಿನದಲ್ಲಿಯೇ ಅಪಾರವಾದ ಕೆಲಸವನ್ನು ಮಾಡಿ ಜನರನ್ನು ಎಚ್ಚರಗೊಳಿಸಿದವರಲ್ಲಿ ಶ್ರೀ ಶ್ರೀ ಶಂಕರಾಚಾರ್ಯರು ಮತ್ತು ಶ್ರೀ ವಿವೇಕಾನಂದರು. ವಿದೇಶೀಯರಲ್ಲಿಯೂ ಧರ್ಮವಿಚಾರದಲ್ಲಿ ನವ ಚೈತನ್ಯವನ್ನು ಹುಟ್ಟಿಸಿದ ಭಾಗ್ಯವು ಶ್ರೀ ವಿವೇಕಾನಂದರವರದು.

ವಿವಿಧ ವಿಷಯಗಳು

ಡೆಲ್ಲಿಯಲ್ಲಿ ಹರಿಜನ ವಾಸಸ್ಥಾನದಲ್ಲಿ ಗಾಂಧೀಜಿಯವರು ನೆಲೆಸಿರುವರಷ್ಟೆ. ಕಳೆದ ವಾರ ಇವರ ಪಕ್ಕದ ಮನೆಯಲ್ಲಿ ವಾಸಮಾಡುತ್ತಿರುವ ಶ್ರೀ ವೊಲ್ಕ ನಿಯವರ ಪತ್ನಿಯವರು ಇವರನ್ನು ಕುರಿತು "ನನ್ನ ಸಂಗಡ ದಯವಿಟ್ಟು ಭೋಜನಮಾಡಿರಿಂದು" ಪ್ರಾರ್ಥಿಸಿದರು. ಅದಕ್ಕೆ ಶ್ರೀ ಗಾಂಧಿಯವರು "ಹರಿಜನರ ಉಪಯೋಗಾರ್ಥವಾಗಿ, ನನಗೆ ದಕ್ಷಿಣೆ ಕೊಡುವದಾದರೆ ಆಗಲಿ" ಎಂದರು. ಅದಕ್ಕೆ ಆಕೆಯು ಆ ಕಾರ್ಯಕ್ಕೆ ಆಗಲೇ ನನ್ನ ಪತಿಯನ್ನು ಕೊಟ್ಟಿರುವದಾಗಿ ತಿಳಿಸಿದಳು.

ಲಂಡನ್ನಿನಲ್ಲಿ ನಡೆದ ಲೀಗ್ ಕೌನ್ಸಿಲ್ಲಿನ ಮಾಟಿಂಗಿನಲ್ಲಿ ಜರ್ಮನಿಯ ಪ್ರತಿನಿಧಿಗಳು ಹಾಜರಿದ್ದು, ಹಿಟ್ಲರರ ಮತವನ್ನೇ ಸಮರ್ಥಿಸಿದರು. ಜರ್ಮನಿಗೆ ಎಲ್ಲದರಲ್ಲಿಯೂ ಸಮಾನತೆ ದೊರಕಿ, ಹಿಂದಿನ ತಪ್ಪು ಗಳನ್ನು ಕೂನೆಗಾಣಿಸಿ, ಯೂರೋಪಿನ ಶಾಂತಿ ಸ್ಥಾಪನೆಗೆ ಎಲ್ಲ ರಾಷ್ಟ್ರಗಳೂ ಸರವಾದಲ್ಲಿ ತಾವೂ ಸಹಕರಿಸುವೆವೆಂದು ಅವರು ನುಡಿದಿರುವರು.

ಹೇಗೆ ಒಂದು ನಾಯಿಯು ನದಿಯಪಾಲಾದ ಅನೇಕ ಜನರ ಪ್ರಾಣವನ್ನು ರಕ್ಷಿಸಿತೆಂಬ ವಾರ್ತೆಯು ದಿಬ್ರೂಘರ್ಹಿಂದ ಬಂದಿದೆ. ಜೋಗಿಬಿಲ್ಲಿನ ಹತ್ತಿರ ಬ್ರಹ್ಮಪುತ್ರಾ ನದಿಯನ್ನು ಒಂದು ದೋಣಿಯಲಿ ಕೆಲವು ಮಂದಿ ಹಳ್ಳಿಯವರು ದಾಟುತ್ತಿದ್ದರು. ಮಧ್ಯದಲಿ ದೋಣಿ ಮಗುಚಿ ಎಲ್ಲರೂ ನೀರು ಪಾಲಾದರು. ಆಗ ನಾಯಿಯು ದಡಕ್ಕೆ ಈಜಿ ಬಂದು ಕೂಗಿಕೊಳ್ಳುತ್ತಿರಲು ಹಳ್ಳಿಯ ಇತರ ಜನರು ಬಂದು ಅದರ ಜೊತೆಯಲ್ಲಿ ಹೋಗಿ, ಸಾಯುತ್ತಿದ್ದವರನ್ನು ರಕ್ಷಿಸಿದರು.

ರಷ್ಯಾ ವಂಶಾಲಕ ಮಕ್ಕಾ ಯಾತ್ರೆಗೆ ಹೊರಟ ಮುಸಲ್ಮಾನ್ ಪ್ರಯಾಣೀಕರಲ್ಲಿ ಕೆಲವರು ತೋಳಗಳಿಗೆ ಆಹುತಿಯಾದರೆಂದು ತಿಳಿಯಬಂದಿದೆ.

ಜೈನಾದಲ್ಲಿ ೧೮ ವರ್ಷದಿಂದ ೪೫ ವರ್ಷದ ವರೆಗೆ ಇರುವ ಫುಟ್ಬಾಲ್ ಆಟದ ಪುರುಷರೆಲ್ಲರೂ ಮಿಲಿಟರಿ ಶಿಕ್ಷಣವನ್ನು ಪಡೆಯಬೇಕೆಂದು ಶಾಸನ ಮಾಡಲಿರುವರು.

ಕೇಕಾನ್ಸ್ ಎಂಬ 23 ವರ್ಷದ ಇಂಗ್ಲೀಷ್ ಯುವತಿಯು ಹೋಲಿವುಡ್ಡಿನಲ್ಲಿ ನಟನಾದ ಹೆನ್ರಿ ಮಾಲಿನ್ ಎಂಬುವನನ್ನು ಪ್ರೀತಿಸಿತ್ತಿದ್ದಾಳೆ. ಅವನಿಗದು ಸರಿಬೀಳದು. ಆದರೆ ಯುವತಿಯೇ ಹಠ ಹಿಡಿದು ಅವನ ಮನೆಯ ಮುಂದೆ ನಿಂತು ಪಿಕೆಟಿಂಗ್ ಮಾಡಿದಳು. ಪೋಲೀಸರು ಬಂದು ಅವಳನ್ನು ಅರೆಸ್ಟು ಮಾಡಿ 60 ದಿನಗಳ ಸೆರೆ ವಿಧಿಸಿದರು.

ಅಮೇರಿಕಾದಲ್ಲಿ ಮಹಾಜಲಪ್ರಳಯವುಂಟಾಗಿದೆ. ಕೋಟ್ಯಾಂತರ ದ್ರವ್ಯ ನಷ್ಟವೂ ಅನೇಕ ಪ್ರಾಣನಷ್ಟವೂ ಸಂಭವಿಸಿರುವದೆಂದು ವರ್ತಮಾನ.

ಅಮೇರಿಕಾದ ಯುನೈಟೆಡ್ ಸ್ಟೇಟ್ಸಿನಲ್ಲಿ ಯಾವ ಆಯುಧಕ್ಕೂ ಲೈಸೆನ್ಸ್ ಬೇಕಾಗಿಲ್ಲ. ಯಾರು ಬೇಕಾದರೂ ಒಂದು ಗುಂಡಿನ ಪಿಸ್ತೂಲಿನಿಂದ ಹಿಡಿದು ಮೆಷಿನ್ ಗನ್ನುಗಳವರೆಗೆ ಕೊಳ್ಳಬಹುದು.

ಗಮನಿಸಿರಿ ! ತಪ್ಪದೇ ಓದಿರಿ !!

ಈ ಪತ್ರಿಕೆಯಲ್ಲಿ ಪ್ರತಿವಾರವೂ ಪ್ರಕಟವಾಗುತ್ತಿರುವ ಜೀವಶಾಸ್ತ್ರದ ವಿಚಾರವಾದ ಲೇಖನಗಳೆಲ್ಲವೂ ಪುಸ್ತಕರೂಪದಲ್ಲಿ ಅಚ್ಚಾಗುತ್ತವೆ.

"ಜೀವಶಾಸ್ತ್ರ ತತ್ತ್ವಸಾರ"

ಅಥವಾ

ಸತ್ಯ ವರಿಲ್ಲಿ ?

ಲೇಖಕರು—ಕೆ' ಯವರು.

ಈ ಗಂಥದ ಮೊದಲನೆಯ ಮುದ್ರಣಕ್ಕೆ ಮಿತವಾದ ಸಂಖ್ಯೆಯ ಪ್ರತಿಗಳನ್ನು ಮಾತ್ರ ಅಚ್ಚು ಹಾಕುವ ಏರ್ಪಾಡುಮಾಡಿದೆ. ಬೇಕಾದವರು ಮೊದಲೇ ತಮ್ಮ ಹೆಸರನ್ನು ಎಡಿಟರವರಲ್ಲಿ ರಿಜಿಸ್ಟರ್ ಮಾಡಿಸಬೇಕು. ಅಂಥವರಿಗೆ ಗ್ರಂಥವು ಅಚ್ಚಾಗುತ್ತಲೇ ವಿ. ಪಿ. ಮೂಲಕ ಕಳುಹಿಸಲಾಗುತ್ತದೆ.

ಸೊಂದವರೇ ! ಮರುಗುತ್ತಿರುವವರೇ !!

ಇಲ್ಲಿ ಗಮನಿಸಿರಿ !!!

ಮರಣಹೊಂದಿದ ನಿಮ್ಮ ಪ್ರಿಯಬಂಧುಗಳು ಎಲ್ಲಿರುವರು ? ಅವರೊಡನೆ ಸಂಭಾಷಿಸಬಹುದೆ ? ಈ ಅಮೋಘವಾದ ವಿಚಾರವನ್ನು ಮೇಲ್ಕಂಡ ಪುಸ್ತಕವನ್ನು ಕರಿಸಿಕೊಂಡು ಓದಿ ತಿಳಿಯಿರಿ. ಈ ವಿಶೇಷವಾದ ದುಃಖಕಮನವನ್ನು ಹೊಂದದೇ ಇರಬೇಡಿ. ಕೂಡಲೇ ಎಡಿಟರವರಲ್ಲಿ ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿ ರಿಜಿಸ್ಟರ್ ಮಾಡಿಸಿರಿ.

"ಸತ್ಯವಾದಿ ಆಫೀಸು"

ಚಾಮರಾಜಪುರಂ, ಮೈಸೂರು.

ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವ್ಯರ್ಥಾ ಚಿಂತಿಸಬೇಡಿ. ಮುಂದೆ ಬರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ. ನಿಮ್ಮ ಜಾತಕದ ನಕಲನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೊ ತಿಳಿಸಿರಿ. ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ. ತೃಪ್ತಿಕರವಾಗಿ ಉತ್ತರವನ್ನು ಕಳುಹಿಸುವೆವು. ಫೀಜು ಒಬ್ಬರಿಗೆ ೧—೪—೦ ರೂಪಾಯಿ ಮಾತ್ರ

ರಾಜಕ ಜ್ಯೋತಿಷ್ಯರು,

೧೦೬೮ ಚಾಮರಾಜ ಅಗ್ರಹಾರ, ಮೈಸೂರು

ನೀರಿನಿಂದ! ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು ಈಗಲೇ ಕೊಂಡುಕೊಳ್ಳಿ

H. SASSEN & CO.,
15 Armenian Street, Post Box 163
G. T. MADRAS

Siromani NARAYANACHARYA—
Chowkambha, Benarese.

S.U.N. & CO.
BENARES CITY

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ- ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಆದರಿಂದ ಏನುಫಲ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರಿಗೆ; 100 ರುದ್ರಾಕ್ಷಿಗಳುಳ್ಳಸರ 1 ಕ್ಕೆ ಆಣೆ 3 ರಿಂದ ರೂ. 25 ರವರೆಗೆ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ 50 ರವರಿಗೆ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರಿಗೆ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರಿಗೆ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರಿಗೆ. ಸಣ್ಣ ರುದ್ರಾಕ್ಷೀ ಆವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ; ದೊಡ್ಡ ರುದ್ರಾಕ್ಷೀ ಆಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ] 1 ಆಣೆ ಸ್ಟಾಂಪು ಕಳುಹಿಸಿದಲೆ 3 ಇನಾಮುಗಳು: 1 ವಿಶ್ವೇಶ್ವರ ಪಠ, 1 ಕಾಶೀನಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಚೌಖಂಬಾ, ಬೆನಾರಿಸ್ [ಕಾಶಿ.

shanmukhavilas
Coffee Club
Jaganmohan Palace Road
M y S O R E
— for —
EXCELLENTTIFFIN, & COFFEE

Wanted

Agents with Pay and Allowances
to canvass subscribers and advertisers for
Satyavadi

Apply in person or through post to
The Manager,
Satyavadi Office, Satyavadi Buildings,
Chamarajpuram, Mysore.

॥ ಶ್ರೀ ॥

ಸತ್ಯಂ ಪರಂ ಬ್ರಹ್ಮ ವಿಜ್ಞಾನ ರೂಪಂ
ಸತ್ಯಂ ಹಿ ಸೃಷ್ಟಿ-ಸ್ಥಿತಿ-ಲೀನ ಕರ್ತೃ |
ಸತ್ಯಂ ಹಿ ಸಾಮ್ಯೇ ಕಿಲವಸ್ತುಧರ್ಮಃ
ಸತ್ಯಂ ಶರಣ್ಯಂ ಶರಣಂ ಪ್ರಪದ್ಯೇ ॥

ಸತ್ಯವಾದಿ

ಶ್ರೀ ಸುಭಾಷ್ ಚಂದ್ರ ಬೋಸರ ಮೇಲೆ ನಿರ್ಬಂಧ.

ಬರುವ ಲಕ್ನೋ ಕಾಂಗ್ರೆಸ್ಸಿಗೆ ಶ್ರೀಯುತ ಬೋಸರು ಬರುವರೆಂದು ಪ್ರಕಟವಾಗಿತ್ತು ; ಮತ್ತು ಮುಂದೆ ಕಾಂಗ್ರೆಸ್ಸಿನ ಸೆಕ್ರೆಟರಿಯೂಗಿ ನಿಯಮಿಸಲ್ಪಡುವರೆಂದೂ ವದಂತಿ ಇದ್ದಿತು. ಶ್ರೀ ಬೋಸರೆಂದರೆ ಸರ್ಕಾರಕ್ಕೆ ಸ್ವಲ್ಪ ಹಾಗೆ ಹಾಗೆ. ಅವರು ಬರುವ ವಿಚಾರತಿ ದೊಡ್ಡ ಬೋಸರಿಗೆ ಬಿಯನ್ನಾದಲ್ಲಿರುವ ಬ್ರಿಟಿಷ್ ರಾಯಭಾರಿಗಳ ಮೂಲಕ "ನೀವು ಹಿಂದೂಸ್ಥಾನಕ್ಕೆ ಬಂದರೆ ಖೈದು ಮಾಡಲಾಗುವುದೆಂದು" ಬ್ರಿಟಿಷ ಸರ್ಕಾರದ ಪರರಾಷ್ಟ್ರ ಮಂತ್ರಿಗಳು ತಿಳಿಯಪಡಿಸಿದರು. ಭರತಖಂಡದ ಕೇಂದ್ರ ಅಸೆಂಬ್ಲಿಯಲ್ಲಿ ಸರ್ಕಾರದ ಈ ವರ್ತನೆಯನ್ನು ಖಂಡಿಸುವ ಠರಾವು ಚರ್ಚೆಗೆ ಬಂದು, ಪಾಸಾಯಿತು. ಶ್ರೀ ಬೋಸರು ತಪ್ಪಿತಸ್ಥರೆಂದೂ ಕ್ರಾಂತಿಕಾರರೆಂದೂ ಸರಕಾರದವರು ತಿಳಿದಿದ್ದರೆ, ಅವರನ್ನು ನ್ಯಾಯಸ್ಥಾನದಲ್ಲಿ ವಿಚಾರಣೆಗೊಳಪಡಿಸಿ ಶಿಕ್ಷಿಸಬಹುದು. ಅದು ಬಿಟ್ಟು, ದೇಶಾಭಿಮಾನಿಗಳಾದ ದೇಶಸೇವಕರನ್ನು ಈ ರೀತಿ ರಾಷ್ಟ್ರಕಾರ್ಯಗಳಲ್ಲಿ ಪ್ರತಿಬಂಧಿಸುವದು ಸರಿಯಾದುದಲ್ಲ.

ನಗರವಾರ್ತೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ಮೈಸೂರು ವಿಶ್ವವಿದ್ಯಾಲಯದ ಪದವಿಧರತೆಯ ಎಲ್ ಎಲ್. ಡಿ. ಪ್ರಶಸ್ತಿ

ಮೈಸೂರು ವಿಶ್ವವಿದ್ಯಾನಿಲಯದವರು ಶ್ರೀಮನ್ಮಹಾರಾಜರವರಿಂದ (ಛಾನ್ಸೆಲರ್) ದಿವಾನ ಬಹದ್ದೂರ್ ರಾಜಸಭಾಭೂಷಣ ಸರ್ ಕೆ ಪಿ. ಪುಟ್ಟಣ್ಣಶೆಟ್ಟರಿಗೆ ಎಲ ಎಲ್. ಡಿ. ಪ್ರಶಸ್ತಿ ಗೌರವ ಪದವಿಯನ್ನು ಧಾರೆಯೆರಿಸಿದರು ಇದಕ್ಕೆ ದಿವಾನರಾದ ಸರ್ ವಿ ಪಿ ಮಾಧವರಾಯರು ಮುಂತಾದ ಅನೇಕ ಮಂದಿಗಳು ಸ್ತ್ರೀಯರುಗಳು ಬಾಲಕಬಾಲಕಿಯರು ಮುಂತಾದ ಪ್ರಮುಖರು ಜಗನ್ಮೋಹನಬಂಗಲೆಯಲ್ಲಿ ಕಳೆದ ತಾ॥ ೨೫ ನೆಯ ಬುಧವಾರ ಬೆಳಿಗ್ಗೆ ೮ ಗಂಟೆಗೆ ಸಭೆ ಸೇರಿದ್ದರು. ವಿಶ್ವವಿದ್ಯಾನಿಲಯದ ಪದಪ್ರದಾನ ಗೌರವ ಮಾಡಿಸಲು ಶ್ರೀಮನ್ಮಹಾರಾಜರವರು ಬಂದ ಕೂಡಲೆ ಬೀಳ್ಕೊಂಡು ರಾಜಗದ್ದಿಗೆಯ ಮೇಲೆ ಮುಂಡಿಸಿ ವಿರಾಜಿಸಿದ ಪದಕ್ಕೆ ಕರತಂದರು. ವೈಸ್‌ಛಾನ್ಸೆಲರ್ ಎಸ್ ಎಸ್ ಸುಬ್ಬರಾಯರು ಶ್ರೀಮನ್ಮಹಾರಾಜರು ಸಭೆಯನ್ನು ಪ್ರಾರಂಭಿಸಿದ ಮೇಲೆ ಈ ಗೌರವ ಎಲ್ ಎಲ್. ಡಿ. ಪದವಿಗೆ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರನ್ನು ಆಹ್ವಾನಿಸಿ ಬೀಳ್ಕೊಟ್ಟರು. ಪ್ರಮಾಣ ಪತ್ರದಪದನಿರ್ಧಾರಣೆಯುಳ್ಳ ತರುವಾಯ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ತಮ್ಮ ಅನುರಾಗಪೂರ್ವಕವಾದ ಅನಂತ ವಂದನೆಗಳನ್ನು ಶ್ರೀಮನ್ಮಹಾರಾಜರವರಿಗೆ ಸಮರ್ಪಿಸಿದರು. ಅನಂತರ ಮುಕ್ತಾಯವಾಯಿತು. ಈ ಮೈಸೂರು ವಿಶ್ವವಿದ್ಯಾಲಯವನ್ನು ನಿರ್ಮಿಸಿದ ಸರ್ ಎಂ. ವಿಶ್ವೇಶ್ವರಯ್ಯನವರು ಮತ್ತು ಪ್ರಥಮ ವೈಸ್‌ಛಾನ್ಸೆಲರಾದ ಹೆಚ್. ವಿ. ನಂಜುಂಡಯ್ಯನವರು ಸಹ ಮೊಟ್ಟಮೊದಲಿ ಇಂಥಾ ಅನುಪಮ ಪದವಿಗೆ ಪಾತ್ರರಾಗಿದ್ದರೂ ದೈವಕೃಪೆ ಬೇರೆಯಾಗಿತ್ತು. ಸರ್ ಎಂ ವಿಶ್ವೇಶ್ವರಯ್ಯನವರನ್ನು ನಾವು ಗೌರವಿಸುವದಕ್ಕೆ ಪೂರ್ವ ಗುಣಪಕ್ಷಪಾತನಿಮಿತ್ತ ಲಾಹೋರ್ ವಿಶ್ವವಿದ್ಯಾನಿಲಯದವರು ಸನ್ಮಾನಿಸಿದರು. ಡಾ॥ ಶಾಮಶಾಸ್ತ್ರಿಗಳನ್ನು ಅವರಅರ್ಥಶಾಸ್ತ್ರ ಪರಿಭಾಷೆಗೆ ಸರ್ ಆಶುತೋಷ್ ಮುಖರ್ಜಿಯವರ ದಯೆಯಿಂದ ಕಲಕತ್ತಾ ವಿಶ್ವವಿದ್ಯಾನಿಲಯದವರು ಸನ್ಮಾನಿಸಿದರು. ಹೆಚ್. ವಿ ನಂಜುಂಡಯ್ಯನವರು ಕಾಲವಶವಾದ್ದರಿಂದ, ಸರ್ ಕೆ. ಪಿ. ಪುಟ್ಟಣ್ಣಶೆಟ್ಟರೆ ಶ್ರೇಷ್ಠವಯೋವೃದ್ಧರಾದ (೭೫ ವರ್ಷ) ರಾಜಸೇವಾಧುರಂಧರರೂ, ತ್ಯಾಗಿಗಳೂ ಆಗಿರುವ ಮೊಟ್ಟಮೊದಲಿನ ನಾಗರೀಕರು. ಇದು ಮೈಸೂರಿನ ಹೆಮ್ಮೆ ಹೊರ್ತು ಬೇರೇನು.

ರಾಜಧಾನಿಯಲ್ಲಿ ಕರ್ನಾಟಕಸಂಘಸ್ಥಾಪನೆ.

ಕಳೆದ ತಾ॥ ೨೬ ನೆಯ ಗುರುವಾರ ಸಾಯಂಕಾಲ ಸರ್ ಕೆ ಪಿ. ಪುಟ್ಟಣ್ಣಶೆಟ್ಟರು ಎಲ್‌ಎಲ್. ಡಿ. ಇವರು ಈ ಸುಘದೊರಂಭೋತ್ಸವವನ್ನು ಧರ್ಮಪ್ರಕಾಶ ಸಾ॥ ಡಿ. ಒನುಮಯ್ಯನವರ ಪಾಠಶಾಲೆಯಲ್ಲಿ ನೆರವೇರಿಸಿದರು. ಅನೇಕ ಮಹಿಳೆಯರು, ಪುರಪ್ರಮುಖರು ಅಧಿಕಾರಿಗಳು ಬಂದಿದ್ದರು. ಶ್ರೀಯುತ ಎಸ್. ಎಸ್. ಸುಬ್ಬರಾಯರು ಮತ್ತು ಮಿಸೆಸ್ ಎಸ್ ಎಸ್ ಸುಬ್ಬರಾಯರು ಸಹ ಬಂದಿದ್ದರು ಪ್ರಾರ್ಥನಾನಂತರ ಶ್ರೀಮಾ॥ ಹೆಚ್. ಲಿಂಗರಾಜೆ ಅರಸಿನವರು. ದರಬಾರುಭಕ್ಷಿ (ಅಧ್ಯಕ್ಷರು) ಸಭೆಯ ಉದ್ದೇಶವನ್ನು ಕುರಿತು ಭಾಷಣಮಾಡಿದರು. ಶ್ರೀಮಾ॥ ಡಿ ವಿ ಗುಂಡಪ್ಪನವರು, ಈ ಸಭೆಯ ಮುಖ್ಯೋದ್ದೇಶವನ್ನು ಶ್ರಮಪಟ್ಟು ತಿಳಿಸಿದರು ಕನ್ನಡದಲ್ಲಿ ಪುರಾತನ ವೈದಿಕಧರ್ಮ, ಪುರಾಣ ಇತಿಹಾಸಕ್ಕೆ ಮಾತ್ರ ಸಂಬಂಧಪಟ್ಟ ಗ್ರಂಥಗಳಿವೆ ಅವು ಈ ಕಾಲಕ್ಕೆ ಮತ್ತು ಈಗಿನ ನಾಡಿನ ಆರ್ಥಿಕ ಪುರೋಭಿವೃದ್ಧಿಗೆ ಏನೇನೋ ಸಹಾಯಮಾಡಲಾರದಾದ್ದರಿಂದ, ಕನ್ನಡದಲ್ಲಿ ನೂತನ ಜೀವನವಗ್ರಂಥರಚನೆಗೆ ಪಾಶ್ಚಿಮಾತ್ಯರು ಅನುಕರಿಸಿರುವ ಗ್ರಂಥಗಳು, ಹರಡಬೇಕೆಂದು ವಕ್ತೃವತ್ಸಲ ಹೇಳಿದರು ಸೌ॥ ನಾಗಮ್ಮನವರ ಭಾರತಪಠಣ, ಶ್ರೀಮಾ॥ ದೇವೇಂದ್ರಪ್ಪನವರ ಸಂಗೀತವು ನಡೆದು ಸಭೆಯು ಮುಕ್ತಾಯವಾಯಿತು

* *

ಗಾಸವಿಶಾಂದ ಬಿಡಾರದ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದ ಮಹೋತ್ಸವ

ಶ್ರೀ ರಾಮನವಮಿ ಕಳೆದ ತಾ॥ ೩೧ ರಲಾಗಾಯಿತು ೧೫ ದಿನಪರಿಯಂತರವೂ ಶ್ರೀ ರಾಮಸೇವೆ, ಸಂಗೀತ ಮುಂತಾದವು ನಡೆಯುತ್ತವೆ ಶ್ರೀ ರಾಮ ನವಮಿ ದಿನ ಶ್ರೀಮಾ॥ ವಿದ್ವಾನ್ ಮುನಡಿ ಸುಬ್ರಹ್ಮಣ್ಯಯ್ಯರ್ (ಸಂಗೀತ) ವಿದ್ವಾನ್ ಚೌಡಯ್ಯನವರ ಪಿಟೀಲು, ವಿದ್ವಾನ್ ಪುಟ್ಟಸ್ವಾಮಯ್ಯನವರ ಮೃದಂಗ ನಡೆಯಿತು ದಿವಂಗತರಾದ ಕೃಷ್ಣಪ್ಪನವರು ಯಶಸ್ವಿಗಳು ಅವರ ಮಕ್ಕಳು ಶ್ರೀಮಾನ್ ಬಿ ಕೆ ಸುಬ್ಬಯ್ಯರು ಮತ್ತು ಅವರ ಶಿಷ್ಯರಾದ ವಿದ್ವಾನ್ ಚೌಡಯ್ಯನವರು ಅವರ ತಮ್ಮಂದಿರುಗಳು ಈ ಮಂದಿರವನ್ನು ಅನೇಕ ಕ್ಲೇಶಕಷ್ಟಪರಂಪರೆ ಬಂದೊದಗಿದರೂ ಧೈರ್ಯಕೆಡದೆ ದೇವರನ್ನು ನಂಬಿ ನಡೆಸುತ್ತಿರುವದು ಶ್ಲಾಘನೀಯವಾದ್ದು ಆದರೆ ಈ ಮಹೋತ್ಸವಕ್ಕೆ ಹಿಂದೂ. ತಾಯಿನಾಡು, ವಿಶ್ವ ಕರ್ನಾಟಕ ಜನವಾಣಿ, ನವಜೀವನ, ಪತ್ರಿಕಾ ಸ್ಥಳೀಯ ಪ್ರತಿನಿಧಿಗಳಿಗೆ ಮಾತ್ರ ಉಚಿತ ಆಹ್ವಾನವನ್ನು ಕೊಟ್ಟು ಅದರಂತೆ ಸ್ಥಳೀಯ ಸಪ್ರಸಿದ್ಧ ಇತರ ಪತ್ರಿಕಾ ಪ್ರತಿನಿಧಿಗಳಿಗೆ ಉಚಿತ ಆಹ್ವಾನಕೊಡದಿರುವ ಗೌರವ, ಮಂದಿರದ ಯಶಸ್ಸಿಗೆ ಕುಂದಕವಲ್ಲವೇ ? ಇದನ್ನು ಈ ಮಂದಿರದ ಕಾರ್ಯದರ್ಶಿಗಳು ಜಾಗ್ರತೆ ಸರಿಪಡಿಸುವರೆಂದು ನಂಬುತ್ತೇವೆ

ಮಿಸ್ ಫಿಲೋಮಿನಾ ತಂಬುಚಿಟ್ಟರ

ಪಿಟೀಲುವಾದನ

ಅಮೋಘವಾದ್ಯ ಸಂಗೀತ

ಕಲಾಪ್ರದರ್ಶನ

(ನಮ್ಮ ವಿಶೇಷ ಸುದ್ದಿಗಾರರಿಂದ)

ಶ್ರೀಮತಿ ಫಿಲೋಮಿನಾ ತುಂಬುಚೆಟ್ಟರು, ಜಗನ್ಮೋಹನಬಂಗಲೆಯಲ್ಲಿ ಕಳೆದ ತಾ|| ೧೮ ನೆಯ ಬುಧವಾರ ಸಾಯಂಕಾಲ ೭ ಗಂಟೆಗೆ ಸಹಸ್ರಾರು ಜನರ ಎದುರಿಗೆ ಶ್ರೀಮನ್ಮಹಾರಾಜರವರ ಸಮುಖದಲ್ಲಿ ತಮ್ಮ ಪಾಶ್ಚಿಮಾತ್ಯ ಸಂಗೀತಶಿಕ್ಷಣ ಕಲಾಪ್ರದರ್ಶನವನ್ನು ಅದ್ಭುತವಾದ ಹಸ್ತಲಾಘವ, ಸ್ವಾಧ್ಯಯದಕ್ಷತೆಯಿಂದ ಪ್ರದರ್ಶಿಸಿದರು.

ಈ ಸಂಗೀತಕೂಟವು ಶ್ರೀಮನ್ಮಹಾರಾಜರವರ ಆಜ್ಞಾಪ್ರಕಾರ ನೆರವಿತ್ತು. ಶ್ರೀಮನ್ಮಹಾರಾಜರವರ ಜೊತೆಯಲ್ಲಿ ಬ್ರಿಟಿಷ್ ರೆಸಿಡೆಂಟರು ಅವರ ಪತ್ನಿಯವರು, ಶ್ರೀ ಜಯಚಾಮರಾಜ ಒಡೆಯರವರು, ತ್ರಿಪುಂಡ್ರುವ ರಾಜರವರ ಹೆಣ್ಣುಮಕ್ಕಳು ಸಹ ಬಂದಿದ್ದರು. ದಿವಾಣರವರು, ಅವರ ಸೆಕ್ರೆಟರಿಯವರು, ಮು|| ಗಳಾದ ತುಂಬುಚೆಟ್ಟರು, ರಾಮರಾಯರು, ಇವರ ಮನೆಯ ಹೆಂಗಸರುಗಳು, ಯುವರಾಣಿಯವರು, ರಾಜವರ್ಗದ ಸ್ತ್ರೀಯರು, ಲೇಡಿ ಫಾಸ್ಟರ್, ಲೇಡಿ ಮತ್ತು ಸರ್ ಟಾಂಡ ಹಂಟರು, ಸರಕಾರದ ಉದ್ಯೋಗಸ್ತರೇ ಮುಂತಾದ ಅನೇಕ ಅಧಿಕಾರಿಗಳು, ಪುರಪ್ರಮುಖರು, ಹೆಂಗಸರು ಸಹ ಸೇರಿ ಸಹಸ್ರಾರು ಜನರು ನೆರದಿದ್ದರು. ಇವರ ಫ್ರೆಂಚ್, ಇಟಾಲಿಕ್, ಜರ್ಮನ್, ಮುಪ್ರಸಿದ್ಧ ಸಂಗೀತ ಗೀತಗಳನ್ನು ಸಭೆಯವರು ಕೇಳಿ ವಿಸ್ಮಿತವಾಗುವ ಹಾಗೆ ತಮ್ಮ ಸೌಲಭ್ಯ ಹಸ್ತಲಾಘವದಿಂದ, ಬಾರಿಸಿ ಮರುಳು ಮಾಡಿದರು. ಅರಮನೆಯ (ಆರ್ಕೆಸ್ಟ್ರ) ಸಂಗೀತ ಕಲಾ ಕೂಟದವರು ಇವರಿಗೆ ಹಿನ್ನೆಲೆಯವಾಗಿ ಬಾರಿಸಿದರು. ೧ ಗಂಟೆಯಕಾಲ ನಡೆಯಿತು. ಆಗಾಗ್ಗೆ ಅತ್ಯಾನಂದ ಸೂಚಕವಾದ ಕರತಾಡನವಾಗುತ್ತಿತ್ತು.

ಈಕೆಯು ಶೈಶವಾವಸ್ಥೆಯಲ್ಲಿ ಪಾಶ್ಚಿಮಾತ್ಯ ಸಂಗೀತಕಲಾ ವಿಶ್ವಾಸಾದರವನ್ನು ಹೊಂದಿ ಅದರ ವೃದ್ಧಿಗೆ ಇಂಡಿಯಾದ ಕಲಕತ್ತಾ ಪಟ್ಟಣದಲ್ಲಿ ವಾಸಿಸಿದರು. ಅನಂತರ ಸಮುದ್ರಯಾನಮಾಡಿ ಫ್ರಾನ್ಸ್ ದೇಶದ ಪ್ಯಾರಿಸ್ ನಗರ (ಪಾಶ್ಚಿಮಾತ್ಯ ಜನಾಂಗದ ಸ್ವರ್ಗ) ದಲ್ಲಿ ೮ ವರ್ಷ ವಾಸಮಾಡಿ, ಪಿಟೀಲು ವಾದನದಲ್ಲಿ ಲೋಕಪ್ರಖ್ಯಾತರಾದ ಮತ್ತು ದಿಗಂದ್ದತಿಯಾದ ಜಾರ್ಜಸ್ ಇದಿಸ್‌ಕೊ ಅವರಲ್ಲಿ ಶಿಷ್ಯವೃತ್ತಿ ನಡಾಡಿದರು. ಅಲ್ಲಿ ಪ್ರಶಸ್ತಿಪಡೆದನಂತರ ಲಂಡನ್ ನಗರಕ್ಕೆ ಹೋಗಿ ಗತಿಸಿದ ಜಾರ್ಜ್ ಚಕ್ರವರ್ತಿಯವರ ಸಮುಖದಲ್ಲಿ ಬಂಕಿಂಗ್‌ಹ್ಯಾಮಂ ಅರಮನೆಯಲ್ಲಿ ಅದ್ಭುತವಾದಸವು ಪ್ರದರ್ಶಿಸಲ್ಪಟ್ಟು ಲಂಡನ್ ನಗರವೆಲ್ಲಾ ಇವರ ಸಂಗೀತ ಕಲಾಕೌಶಲ್ಯವನ್ನು ಮೆಚ್ಚಿ ದಿಗ್‌ಬ್ರಾಂತರಾಗುವಂತೆ ಮಾಡಿದರು. ಇವರ ತಾಯಿ ಇವರ ಜೊತೆಯಲ್ಲಿದ್ದು ಕೊಂಡು ತಮ್ಮ ನೇತೃತ್ವದಲ್ಲಿ ಬೆಳೆಸಿದರು. ಇವರು ವಿದೇಶ ಪ್ರವಾಸಮಾಡಿದರೂ ಹಿಂದೂ ಸಾಧ್ವಿಗಳಂತೆ, ಸ್ವಟಿಕಶಿಲಾ ಬಣ್ಣದ ಶೀರೆ, ಹಸರು ರವಕೆ, ಹೆರಳಿನಲ್ಲಿ ಮಲಿಗೆಯ ಮಗ್ಗು ಮುಡಿದಮುಡಿ, ಹಣೆಗೆ ಕುಂಕುಮ ಇಟ್ಟಿದ್ದರು.

ಮೊದಲನೆ ಹೆಂಡತಿಯ ಪ್ರೇತದ ಭೇಟಿ!

ಕಿರಿಹೆಂಡತಿಗೆ ಹಿತೋಕ್ತಿ!

ಕುಂಕುಮ ಮತ್ತು ಕಬ್ಬಿಣದ ಉಂಗುರ

ಸೂರಿ ಹತ್ತಿರವಿರುವ ನಿಂಗೂರವೆಂಬ ಊರಿನಿಂದ ಒಂದು ಪ್ರೇತವು ತಾನು ಮೊದಲಿದ್ದ ಮನೆಗೆ ಭೇಟಿ ಮಾಡಿತೆಂಬ ಸುದ್ದಿಯು ಬಂದಿದೆ!

ಇದು, ಬಾಬು ಕಮಲಾ ನಿರಂಜನ ಭಟ್ಟಾಚಾರ್ಯರೆಂಬುವರ ಮನೆಯಲ್ಲಿ ನಡೆದುದು. ಅವರು ಪ್ರೇಮಿಳೆ ಎಂಬ ತಮ್ಮ ಮೊದಲನೆ ಹೆಂಡತಿಯು ಸತ್ತಮೇಲೆ ಎರಡನೆಯ ಮದುವೆಯನ್ನು ಮಾಡಿಕ್ಕೊಂಡಿದ್ದರು.

ಮನೆಯಲ್ಲಿ ಗಂಡಸರಿಲ್ಲದೆ, ಹೆಂಗಸರೆಲ್ಲರೂ ನಿದ್ರಿಸುತ್ತಿರುವ ಸಮಯದಲ್ಲಿ, ಬಾಬುವರ ಎರಡನೆ ಹೆಂಡತಿಯು, ಯಾರೋ ಸ್ತ್ರೀಯು ಕೋಣೆಯ ಬಾಗಿಲಲ್ಲಿ ಕೂತಿರುವುದನ್ನು ನೋಡಿ, "ನೀನು ಯಾರು" ಎಂದು ಕೇಳಿದಳು. ಅದಕ್ಕೆ ಆ ಸ್ತ್ರೀ ವ್ಯಕ್ತಿಯು "ನಾನು ಪ್ರೇಮಿಳೆ. ನನ್ನ ತೌರುಮನೆಯು ಸುಧುರೆಯಲ್ಲಿದೆ" ಎಂದು ಹೇಳಿ, ಮನೆಯ ಗೃಹಕೃತ್ಯದ ವಿಚಾರವಾಗಿ ಕೆಲವು ಹಿತೋಕ್ತಿಗಳನ್ನು ಹೇಳಿ, ಒಂದು ಕಬ್ಬಿಣದ ಉಂಗುರವನ್ನೂ, ಸ್ವಲ್ಪ ಕುಂಕುಮವನ್ನೂ ಕೊಟ್ಟು ಹಾಗೆಯೇ ಅದೃಶ್ಯಳಾದಳು.

ಎರಡನೆಯ ಹೆಂಡತಿಯು, ಭಯದಿಂದ ಕಿರಿಚಿಕೊಳ್ಳಲು, ಮನೆಯವರೆಲ್ಲರೂ ಎದ್ದು ಓಡಿಬಂದರು. ಆ ಸ್ಥಳವನ್ನೆಲ್ಲಾ ಹುಡುಕಿನೋಡಲು, ಸ್ತ್ರೀ ವ್ಯಕ್ತಿಯು ಕುಳಿತಿದ್ದ ಜಾಗದಲ್ಲಿ ಒಂದು ಕುಂಕುಮದ ರಾಶಿಯೂ, ಸುತ್ತಲೂ ಹೆಜ್ಜೆಯ ಗುರುತುಗಳೂ ಕಂಡುಬಂದವು.

ಆ ಸುತ್ತಮುತ್ತಲಿನ ಊರಿನವರೆಲ್ಲರೂ, ತಂಡೋಪತಂಡವಾಗಿ ಬಂದು ಈ ಆಶ್ಚರ್ಯವನ್ನು ನೋಡುತ್ತಿದ್ದಾರೆ. ಎಲ್ಲರೂ ಆಶ್ಚರ್ಯಚಕಿತರಾಗಿದ್ದಾರೆ. ಜೀವಶಾಸ್ತ್ರಜ್ಞರು, ಈ ಸಂಘಟನೆಯು ಆ ಶಾಸ್ತ್ರದ ನಿದರ್ಶನವೆಂದು ಹೇಳುತ್ತಾರೆ.

ಮೂಗನ್ನು ಇಕ್ಕ್ಯೂರ್ ಮಾಡಿರುತ್ತಾರೆ!

ಅರ್ಧ ಲಕ್ಷ ರೂಪಾಯಿಗಳಿಗೆ!!

ಮೆಕ್ಕಾ ಪಟ್ಟಣದ ಷೇಕ್ ಜಲಾಲ್ ಕ್ಯುರೈಷಿ ಎಂಬುವರು ಮುಪ್ರಸಿದ್ಧ ಸುಗಂಧಕಾರರು. ಪೂರ್ವ ದೇಶಗಳ ಅಮೋಘ ಪರಿಮಳಗಳನ್ನು ವಿಶ್ಲೇಷಿಸಿ, ಪಾಶ್ಚಾತ್ಯ ದೇಶಗಳ ಸ್ತ್ರೀಯರಿಗೆ ಸರಪರಾಜು ಮಾಡುತ್ತಾರೆ. ಇವರು ನೂರಾರು ಪರಿಮಳಗಳನ್ನು ವಾಸನೆಯಿಂದಲೇ ಗುರ್ತು ಹಿಡಿಯಬಲ್ಲರು. ಅವರ ಮೂಗು ಅಂದರೆ ಆಘ್ರಾಣ ಶಕ್ತಿಯು, ಅರ್ಧ ಲಕ್ಷ ರೂಪಾಯಿಗಳಿಗೆ ಏಮೆ ಮಾಡಲ್ಪಟ್ಟಿದೆ!!!

ಕೊಲಂಬಿಯಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಶಾಲೆಯ ಪ್ರಿನ್ಸಿಪಾಲರಾದ ಮಿ| ಕಾರ್ಲ್ ಡಬ್ಲ್ಯು. ಅಕರ್ಮರವರು, ಕೆನಡಾ, ಜಪಾನ್, ಚೈನಾ, ಫಿಲಿಪೈನ್, ಮಲಯಾ ಸ್ಟೇಟ್ಸ್, ಹಿಂದೂಸ್ಥಾನ, ಈಜಿಪ್ಟ್ ಮತ್ತು ಇಟಲಿಗಳಲ್ಲಿ ಸಂಚಾರ ಮಾಡಿದ್ದು, ಈಗ ಪತ್ರಿಕೋದ್ಯಮದ ಸ್ವಾತಂತ್ರ್ಯ" ದ ವಿಷಯವಾಗಿ ಪ್ಯಾರಿಸ್ಸಿನಲ್ಲಿ ಭಾಷಣಮಾಡುತ್ತಿರುವರು. ಇವರು ತಮ್ಮ ಭಾಷಣದಲ್ಲಿ "ಜಪಾನು ಪತ್ರಿಕಾಕರ್ತರು ಅವೇರಿಕಾದವರಿಗಿಂತ ಮೇಲು" ಎಂದು ಅಭಿಪ್ರಾಯಪಟ್ಟಿರುವರು.

ಕಾರ್ಪುರದಲ್ಲಿ ಹೋಳಿ ಹುಣುಮೆಯ ಕಾಲಕ್ಕೆ ರಸ್ತೆಗಳಲ್ಲಿ ಜನರ ಮೇಲೆ ಬಣ್ಣ ಹಾಕಬಾರದೆಂದು ಅಡ್ಡಿ ಮಾಡಿದ್ದರು. ಅದನ್ನು ಮೀರಿ ನಡೆದ ೪೦ ಜನರನ್ನು ಖೈದುಮಾಡಿದರು. ಇವರಲ್ಲೊಬ್ಬ ಮುನಿಸಿಪಲ್ ಕೌನ್ಸಿಲರ್!

ಇವರ ನವಯುವ್ವನದ ಸೊಬಗಿನ ಸೌಭಾಗ್ಯದ ಪ್ರಾದುರ್ಭಾವ ಇವರ ಕಲಾಪ್ರದರ್ಶನಕ್ಕೆ ಅತ್ಯಂತ ಒಣ್ಣಕಟ್ಟಿತ್ತು. ಈ ನಾರೀಮಣಿಯು ಪ್ರಥಮತಃ ಪ್ಯಾರಿಸ್‌ನಲ್ಲಿ ಶಿಕ್ಷಣಹೊಂದಿದ ಭಾರತೀಯ ಸಾಧ್ವಿಮಣಿ. ಈ ಹೆಮ್ಮೆ ನಮ್ಮ ನಾಡಿನ ಬಡತಾಯಿ. ಈಕೆ ಬೊಂಬಾಯಿಗೆ ಬರುತ್ತಲು, ತಮ್ಮ ಸಂಗೀತಕಲಾಪ್ರದರ್ಶನವನ್ನು ಮೈಸೂರಿನಲ್ಲಿ ಶ್ರೀಮನ್ಮಹಾರಾಜರವರ ಮುಂದೆ ಮೊದಲು ಪ್ರದರ್ಶಿಸಿ ತಮ್ಮ ರಾಜಭಕ್ತಿ, ವಿಶ್ವಾಸವನ್ನು ಕಾಣಿಕೆಯಾಗಿ ವಿಶೇಷವಾಗಿ ಕೊಟ್ಟ ಹೊರತು ಇನ್ನೆಲ್ಲೂ ಭಾರಿಸಿ ಪ್ರದರ್ಶಿಸುವದಿಲ್ಲವೆಂದು ಪ್ರತಿಜ್ಞೆಮಾಡಿ ನಡೆಸಿಕೊಂಡರು. ಈ ನಾರಿಮಣಿಯನ್ನು ಪಡೆದಿರುವ ರಾಜಸಭಾಭೂಷಣ ಟಿ. ತಂಬುಶೆಟ್ಟರು ಅವರ ಕುಟುಂಬ ಎಷ್ಟು ಧನ್ಯರೋ, ಮಾನ್ಯರೆಲ್ಲರಿಗೂ ತಿಳಿದ ವಿಚಾರ. ಇವರು ಮೈಸೂರಿನ ನಾರಿಮಣಿಯೂ ಸಹ ಸಮುದ್ರದಾಟಿ, ಪಾಶ್ಚಿಮಾತ್ಯ ಕಲಾಕೌಶಲ್ಯದ ತೌರೂರಾದ ಪ್ಯಾರಿಸ್, ಲಂಡನ್ ನಗರದವರನ್ನು ತಮ್ಮ ಕಲಾಸಂಪತ್ತಿಯಿಂದ ಸೌರಾಷ್ಟ್ರರು, ತಮ್ಮ (ಪಾಶ್ಚಿಮಾತ್ಯ) ಕಲೆಗಳು ಕಲಿತು ತಮ್ಮನ್ನು ಹಿಮ್ಮೆಟ್ಟಬಗರೆಂಬ ಭಾವನೆಯನ್ನು ಸೂರೆಗೊಳಿಸಿದ ಬಾಲಕಲಾಕೋವಿದರೆಂದರೆ ಹೆಚ್ಚಲ್ಲವೆ.

ಗಾಡಿಗಳಲ್ಲಿ ಸಿನೀಮಾ ದೃಶ್ಯ.

ದಿ ಎಲ್. ಇ. ಎಕ್. ಆರ್. ಬ್ರಿಟನ್ ಕಂಪೆನಿಯು ಲೀಡ್ಸ್ ಮತ್ತು ಎಡಿಬರೊಗಳ ಮಧ್ಯೆ ಓಡಾಡುವ ರೈಲುಗಳಿಗೆ ಸಿನಿಮಾ ದೃಶ್ಯವುಳ್ಳ ಕಾರನ್ನು ಜೋಡಿಸಬೇಕೆಂದು ಗೊತ್ತುಮಾಡಿದೆ.

ಜೀವಶಾಸ್ತ್ರದ ತತ್ವಸಾರ
ಮತ್ತು
ಪರಲೋಕ ಜೀವನ

(ಲೇಖಕರು—" ಕೆ. " ಯವರು.)

[ಸಕಲ ಹಕ್ಕುಗಳನ್ನು ಲೇಖಕರು ಹೊಂದಿರುತ್ತಾರೆ]

ಜೀವಶಾಸ್ತ್ರ ಕ್ರಮಗಳಲ್ಲಿ ಸತ್ತವರೊಡನೆ ಮಾತನಾಡುವ ಮಾರ್ಗಗಳಾದರೋ ಸಕಲರೂ ಅಭ್ಯಾಸಿಸಿ ಅದರಿಂದ ತಮ್ಮ ಮರಣಹೊಂದಿರುವ ಪ್ರಿಯಬಂಧುಗಳೊಡನೆ ಸಂಭಾಷಿಸಲು ಸಾಧ್ಯವಾಗಿ ಮಾಡತಕ್ಕವು. ಇದರಿಂದ ಮರಣದಿಂದ ಉಂಟಾಗುತ್ತಿರುವ ದುಃಖವೂ ಖೇದವೂ ಬಹಳವಮಟ್ಟಿಗೆ ಹಿಡಿಮೆಯಾಗುವುದು. ಲೋಕದಲ್ಲೆಲ್ಲಾ ಅತ್ಯಂತ ದುಃಖಕರವಾದುದೂ ಸರ್ವಸಾಮಾನ್ಯವಾದುದೂ ಆದ ವಿಷಯವೆಂದರೆ ಮರಣವೇ? ಈ ಮರಣವೆಂಬ ಘೋರಘಾತದಿಂದ ಸೊಂದು ನರಳುತ್ತಿರುವ ಅನೇಕಾನೇಕ ಹೃದಯಗಳಿಗೆ ಶಾಂತತೆಯನ್ನೂ ಸಮಾಧಾನವನ್ನೂ ಕೊಡುವುದರಿಂದ ಲೋಕದ ದುಃಖದಲ್ಲಿ ಹೆಚ್ಚು ಭಾಗವನ್ನು ಪರಿಹರಿಸಿದಂತಾಗುವುದಿಲ್ಲವೇ? ಇಂತಹ ಶಾಂತತೆಯನ್ನೂ ಸಮಾಧಾನವನ್ನೂ ಕೊಡತಕ್ಕ ಶಾಸ್ತ್ರವೇ ಜೀವಶಾಸ್ತ್ರವು. ಈ ಶಾಸ್ತ್ರಜ್ಞಾನವು ಹಿಂದೆಯೇ ಹೇಳಲ್ಪಟ್ಟಿರುವಂತೆ, ಮನುಷ್ಯವರ್ಗಕ್ಕೆ ಸೇರಿದ ಪ್ರತಿಯೊಬ್ಬರಿಗೂ ಅತ್ಯಾವಶ್ಯಕವಾಗಿರುತ್ತದೆ. ಈ ಶಾಸ್ತ್ರದ ಅಧ್ಯಯನವೂ, ಅದನ್ನು ಎಲ್ಲರಲ್ಲಿಯೂ ಪ್ರಚಾರಮಾಡುವುದೂ, ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ. ಪ್ರಸ್ತುತದಲ್ಲಿ ಕೂಟ್ಯಾಂತರ ಜನರು ಈ ಶಾಸ್ತ್ರದ ತತ್ವಗಳನ್ನು ತಿಳಿಯದೆ, ಸತ್ತವರು ಇರುವರೆಂದು ಅವರೊಡನೆ ಸಂಭಾಷಣೆಯು ಸಾಧ್ಯವೆಂದೂ ತಿಳಿಯದೆ, ಅಪಾರ ದುಃಖದಿಂದ ನರಳುತ್ತಿದ್ದಾರೆ.

ಜೀವಶಾಸ್ತ್ರದಲ್ಲಿ, ಇನ್ನೂ ಅನೇಕ ವಿಷಯಗಳು ಅಡಕವಾಗಿರುತ್ತವೆ. ಸುಪ್ರಸಿದ್ಧ ಶಾಸ್ತ್ರಜ್ಞರು ಪ್ರತಿದಿನವೂ ಈ ಶಾಸ್ತ್ರದ ಪರಿಶೋಧನೆಯನ್ನು ಮಾಡುತ್ತಾ ಹೊಸವಿಷಯಗಳನ್ನು ಕಂಡು ಹಿಡಿಯುತ್ತಲೇ ಇರುತ್ತಾರೆ. ಮರಣಹೊಂದಿದ ಮೇಲೆ ಘಟ್ಟಿ ಹೊತ್ತಿನೊಳಗಾಗಿ ಸತ್ತವನೊಡನೆ ಮಾತನಾಡಬಹುದೆಂದು ನೋಡಿದರೆ, ಕೆಲವು ಸಂದರ್ಭಗಳಲ್ಲಿ ಸತ್ತ ೧-೨ ಗಂಟೆಗಳ ಕಾಲದಲ್ಲಿಯೇ ಸಂಭಾಷಣೆಯು ನಡೆಸಲ್ಪಟ್ಟಿದೆ ಇನ್ನು ಕೆಲವು ಸಂದರ್ಭಗಳಲ್ಲಿ ೧-೨ ದಿವಸಗಳಾದರೂ ಆಗಬಹುದು. ಮುಖ್ಯವಾಗಿ ಸಾಯುವಾಗ ಮನುಷ್ಯನು ಒಂದು ವಿಧವಾದ ನಿದ್ರಾವಸ್ಥೆಯಲ್ಲಿರುವನು. ಈ ವಿಧವಾದ ಮೂರ್ಛೆಯಿಂದ ತಿಳಿದು ಏಳುತ್ತಲೇ, ತಾನು ಅದುವರೆವಿಗೂ ಹೊಂದಿದ್ದ ಸ್ಥೂಲಶರೀರವು ಬೇರೆ ನಿರ್ಜೀವವಾಗಿರುವುದನ್ನೂ ಮತ್ತು ಬೇರೆ ಹೊಸದಾದ ಸೂಕ್ಷ್ಮಶರೀರದಲ್ಲಿರುವುದನ್ನೂ ನೋಡಿ ಘಾಬರಿಯಾಗುವುದುಂಟು. ಸತ್ತ ಮನುಷ್ಯನು, ತಾನಿರುವ ನೂತನ ಸ್ಥಿತಿಯಲ್ಲಿ ಸ್ವಲ್ಪ ಸಮಾಧಾನ ಹೊಂದಿದ ಹೇಲೆ ಸಂಭಾಷಿಸುವನು. ಪರಲೋಕದಲ್ಲಿರುವ ಜೀವನವೂ, ಈ ಲೋಕದ ಜೀವನವನ್ನೇ ಅನುಸರಿಸಿರುತ್ತದೆ. ಅಲ್ಲಿರುವವರು, ಹೆಚ್ಚಾಗಿ ದೇವರಧ್ಯಾನ, ಸ್ತೋತ್ರಗಳಲ್ಲಿ ಕಾಲವನ್ನು ಕಳೆಯುತ್ತಾರೆ. ಅವರಿಗಿರುವ ವ್ಯಸನವು, ಈ ಲೋಕದಲ್ಲಿರುವ ಅವರ ಬಂಧುಗಳಿಂದಲೇ ಉಂಟಾದುದಾಗಿದೆ ಸತ್ತವರು ಸುಖವಾಗಿದ್ದರೂ ತಮ್ಮ ಬಾಂಧುಗಳು ಕೇವಲ ಅಜ್ಞಾನದಿಂದ ನರಳುತ್ತಿರುವುದನ್ನು ನೋಡಿ ಬಹಳವಾಗಿ ಮರುಗುವರು. ಇದಲ್ಲದೆ, ಜೀವಶಾಸ್ತ್ರದ ಮಾರ್ಗಗಳನ್ನು ತಿಳಿಯದೆ, ಅವುಗಳ ಮುಖಾಂತರವಾಗಿ ತಮ್ಮ ಬಂಧುಗಳನ್ನು ಸಮಾಧಾನಪಡಿಸಲು ಸಾಧ್ಯವಿಲ್ಲದೆ, ಬಹಳವಾಗಿ ವ್ಯಸನಪಡುತ್ತಾರೆ. ಈಗ ನಮ್ಮ ಸ್ನೇಹಿತನು ಒಂದು ಪರದೆಯ ಹಿಂದೆ ಇದ್ದಾನೆಂದು ತಿಳಿಯೋಣ. ಅವನು ನಮ್ಮನ್ನು ನೋಡಬಲ್ಲನು, ಆದರೆ ನಾವು ಅವನನ್ನು ನೋಡಲಾರೆವು. ಅವನೊಡನೆ ಸಂಭಾಷಿಸಲು ಟೆಲಿಫೋಕ್ ಯಂತ್ರದಿಂದಲೇ ಸಾಧ್ಯವೆಂದು ತಿಳಿಯೋಣ. ಈಗ ನಾವು ಆ ಟೆಲಿಫೋಕ್ ಯಂತ್ರದ ಉಪಯೋಗವನ್ನು ತಿಳಿದು ಅದರಂತೆ ಮಾತನಾಡಿದರೆ ಆಗ ನಮ್ಮ ಸ್ನೇಹಿತನು ಪರದೆಯ ಹಿಂದೆ ಇರುವುದು ನಮಗೆ ತಿಳಿಯುತ್ತದೆ. ಇಲ್ಲದಿದ್ದರೆ, ನಮ್ಮ ಸ್ನೇಹಿತನು ಹತ್ತಿರವಿದ್ದರೂ ಇಲ್ಲವೆಂದೇ ತಿಳಿಯುತ್ತೇವೆ ಆದರೆ ನಮ್ಮ ಸ್ನೇಹಿತನು ನಮ್ಮನ್ನು ನೋಡಿ ಸಂಭಾಷಿಸಲು ಸಾಧ್ಯವಿಲ್ಲದೆ ಸುಮ್ಮನಿರುತ್ತಾನೆ. ಸತ್ತವರ ಸ್ಥಿತಿಯೂ ಈ ರೀತಿಯೇ ಇರುತ್ತದೆ. ಅವರು ನಮ್ಮನ್ನು ನೋಡಬಲ್ಲರು. ಆದರೆ ನಮ್ಮನ್ನು ಸ್ಪರ್ಶ ಅಥವಾ ಶಬ್ದದಿಂದ ಮುಟ್ಟಲಾರರು. ಅವರು ನಮ್ಮೊಡನೆ ಮಾತನಾಡತೊಡಗಿದರೆ ಅವರ ಸೂಕ್ಷ್ಮಶರೀರದ ಬಾಯಿನಿಂದ ಹೊರಡುವ ಮಾತುಗಳು ನಮ್ಮ ಈ ಸ್ಥೂಲ ಕಿವಿಗೆ ಕೇಳಿಸುವುದಿಲ್ಲ ಆದ್ದರಿಂದ ಸತ್ತವರ ಪಾಲಿಗೆ ನಾವು ಕುರುಡು, ಮೂಕರಂತೆ ಮತ್ತು ಕಿವುಡರಂತೆಯೂ ತೋರುತ್ತೇವೆ. ಟೆಲಿಫೋನ್‌ನಂತಿರುವ, ಜೀವಶಾಸ್ತ್ರ ಮಾರ್ಗಗಳನ್ನು ಅನುಸರಿಸಿದುದೇ ಆದರೆ ಆಗ ಅವರ ಸ್ಥಿತಿಗತಿಗಳು ನಮಗೆ ತಿಳಿಯುವುವು ಮತ್ತು ಸತ್ತವರು ತಮ್ಮ ಮನಸ್ಸಿನಲ್ಲಿರುವ ಎಲ್ಲಾ ಯೋಜನೆಗಳನ್ನೂ ನಮಗೆ ತಿಳಿಸಲ್ಲರು.

ಸತ್ತವರು ಪರಲೋಕದಲ್ಲಿ ಕೆಲವು ಕಾಲ ಇರುತ್ತಾರಷ್ಟೆ. ಅವರ ಕರ್ಮಾನುಸಾರವಾಗಿ ಅವರು ಪುನಃ ಈ ಲೋಕದಲ್ಲಿ ಜನ್ಮವೆತ್ತುವರು. ಹೀಗೆ ಪುನರ್ಜನ್ಮವೆತ್ತುವಾಗ ಅವರ ಸೂಕ್ಷ್ಮಶರೀರವು ಅತ್ಯಂತ ಚಿಕ್ಕದಾಗಿ ಗರ್ಭದಲ್ಲಿ ಪಿಂಡಾಕಾರವನ್ನೇ ಹೊಂದುವುದು. ಶಿಶುವು ಜನಿಸಿದಾಗ ಅದರ ಸೂಕ್ಷ್ಮಶರೀರವೂ ಅಷ್ಟೇ ಅಳತೆಯುಳ್ಳದಾಗಿ ಅದೇ ಆಕಾರವನ್ನು ಹೊಂದಿರುತ್ತದೆ. ಹೀಗೆ ಸತ್ತವರು ಈ ಲೋಕದಲ್ಲಿ ಪುನಃಜನ್ಮವೆತ್ತಿದರೆ, ಪರಲೋಕದಲ್ಲಿರುವವರು ಪುನರ್ಜನ್ಮವೆತ್ತಿದವರನ್ನು ಮರಣಹೊಂದಿದಂತೆಯೇ ಗಣಿಸುವರು. ಹೀಗೆ ಪುನರ್ಜನ್ಮವೆತ್ತಿರುವವರು ಹಿಂದಿನ ಜನ್ಮದಲ್ಲಿ ಯಾರಾಗಿದ್ದರೆಂಬುದನ್ನು ಜೀವಶಾಸ್ತ್ರ ಮಾರ್ಗಗಳ ಸಹಾಯದಿಂದ ಕಂಡುಹಿಡಿಯಬಹುದಾಗಿದೆ. ಇದಲ್ಲದೆ ಮರಣಹೊಂದಿರುವ ಬಂಧುಗಳು ಪರಲೋಕದಲ್ಲಿಯೇ ಇರುವರೆ? ಅಥವಾ ಪುನರ್ಜನ್ಮವನ್ನು ಈ ಲೋಕದಲ್ಲಿ ಹೊಂದಿರುವರೆ? ಹಾಗಾದರೆ ಎಲ್ಲಿ, ಯಾರ ಮನೆಯಲ್ಲಿ ಪುನರ್ಜನ್ಮವೆತ್ತಿರುವರು? ಎಂಬುದನ್ನು ಈ ಶಾಸ್ತ್ರ ಮಾರ್ಗಗಳಿಂದ ಕಂಡುಹಿಡಿಯಬಹುದಾಗಿದೆ. ಪರಲೋಕದಲ್ಲಿರುವ ಜೀವರುಗಳನ್ನು ಕೇಳಿದರೆ ಅವರು ಪುನರ್ಜನ್ಮವೆತ್ತಿರುವವರು ಇಂಥವರ ಮನೆಯಲ್ಲಿಯೇ ಜನಿಸಿರುವರೆಂದು ನಮಗೆ ತಿಳಿಸುವರು. ಈಗ ನಾವೆಲ್ಲರೂ ಪುನರ್ಜನ್ಮವೆತ್ತಿರುವ ಜೀವಗಳೆಂದೇ ತಿಳಿಯಬೇಕು. ನಮ್ಮ ಹಿಂದಿನ ಜನ್ಮದ ನೆನೆಪು ನಮಗೆ ಸಹಜವಾಗಿ ಇಲ್ಲವಾದುದರಿಂದ ನಮಗೆ ಈ ಜನ್ಮದ ನೆನಪು ಮಾತ್ರ ಇರುತ್ತದೆ. ಆದರೆ ಇಡೀ ಜಗತ್ತನ್ನೇ ಆಶ್ಚರ್ಯಪಡಿಸಿರುವ ಶಾಂತಾದೇವಿಗೆ ದೈವಾನುಗ್ರಹದಿಂದ ಹಿಂದಿನ ಜನ್ಮದ ನೆನಪು ಸ್ಪಷ್ಟವಾಗಿದೆ. ಜೀವಶಾಸ್ತ್ರವು ಅವೋಘವಾದುದು. ಆದರಲ್ಲಿ ಇನ್ನೂ ಅನೇಕಾನೇಕ ವಿಷಯಗಳು ಪರಿಶೋಧಿಸಲ್ಪಡಬೇಕಾಗಿದೆ. ಈ ಲೋಕಕ್ಕೂ ಮಧ್ಯೆ ಪರದೆಯಂತಿರುವ ಮರಣದ ಮರ್ಮವನ್ನು ಬಹಿರಂಗಪಡಿಸಿ, ಪರಮಾತ್ಮನ ಮಹಿಮೆಯನ್ನು ಮನಗಾಣಿಸುವ ದಿವ್ಯಶಾಸ್ತ್ರವೇ ಜೀವಶಾಸ್ತ್ರವು.

[ಮುಂದುವರಿಯುವುದು.

ತಮ್ಮಲ್ಲಿ ಕೆಲಸಕ್ಕಿರುವ ಹರಿಜನರಿಗೆ ವೇತನವನ್ನು ಒದಗಿಸಲು ಜಬ್ಬಲ್‌ಪುರದ ಮುನಸಿಪಾಲಿಟಿಯವರು ೫೦ ಸಾವಿರ ರೂಪಾಯಿಗಳನ್ನು ವ್ಯಯಮಾಡಲಿರುತ್ತಾರೆ.

ರಾಂಚಿಯಲ್ಲಿ ಅದ್ಭುತಪ್ರಾಣಾಯಾಮಶಕ್ತಿಯನ್ನು ಎಂ|| ಸಿನ್ಹ ಎಂಬ ಪೊಲೀಸು ಸಬ್ ಇನ್‌ಸ್ಪೆಕ್ಟರು ಪ್ರದರ್ಶಿಸಿದರು. ತನ್ನ ಕತ್ತಿನಿಂದ ಓಡುವ ಮೋಟಾರನ್ನು ನಿಲ್ಲಿಸಿದರು.

ಸ್ವಾತ್ಯಂತ್ರ್ಯಾಸ್ಪೋಟನ ಸ್ಥಳದಲ್ಲಿ ಎಂಬಾತನೂ ಮತ್ತು ಆತನ ಪತ್ನಿಯೂ ತಮ್ಮ ವಿವಾಹದ ಸ್ವರ್ಣ ಮಹೋತ್ಸವವನ್ನು ಈಚೆಗೆ ವಿಜೃಂಭಣೆಯಿಂದ ನೆರವೇರಿಸಿಕೊಂಡರು. ಆದರೆ, ಈಗ ಹೆಂಡತಿಯು ವಿವಾಹ ವಿಚ್ಛೇದನಕ್ಕೆ ಅರ್ಜಿ ಹಾಕಿದಾಳೆ. ! ಕಾರಣ. ಗಂಡನ, ಈಕೆಯನ್ನು ಜುಗಿಟವನಂತೆ!

ಸಲ್ಲಿ ವಸ್ತುಪ್ರದರ್ಶನದಲ್ಲಿ ಬಹಮಾನವನ್ನು ಹಂಚುತ್ತ, ಗಾಂಧಿಜೀಯವರು ಹಾಸ್ಯಾಸ್ಪದವಾಗಿ ಮಾತನಾಡುತ್ತಿದ್ದರು. ಬಹುಮಾನಪಡೆದ ಒಬ್ಬ ಹುಡುಗನನ್ನು ತನ್ನ ಮಗನಂತಿರುವನೆಂದೂ, ಒಬ್ಬ ಮುದುಕಿಯನ್ನು ತನ್ನ ತಾಯಿಯಂತಿರುವಳೆಂದೂ ತಮಾಷೆಗೆ ತಿಳಿಸಿದರು.

ಜಮ್ಮದಾಸಿ ಎಂಬ ೨೦ ವರ್ಷದ ಯುವತಿಯು, ತಾನು ವೇಶ್ಯಾಂಗನೆಯಾಗಿ ಜೀವನ ನಡಿಸಲು ಅನುಜ್ಞೆ ಕೊಡಬೇಕೆಂದೂ, ತನ್ನ ಜೀವನಕ್ಕೆ ಏನೂ ರಹಾ ಇಲ್ಲವೆಂದೂ, ಬಡ್ವಾಕ್ ಸಬ್‌ಡಿವಿಜ್ ಅಧೀನರ ಕೋರ್ಟಿಗೆ ಅರ್ಜಿಹಾಕಿರುತ್ತಾಳೆ. ಇದರ ವಿಚಾರ ಪೂರ್ತಾ ತನಿಖೆಮಾಡಲು ಪೊಲೀಸಿನವರಿಗೆ ತಿಳಿಸಿದ್ದಾರೆ.

ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯೂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯವಿರುವ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯವೂ ಶಕ್ತಿಯೂ ಅತಿ ಮುಖ್ಯವಾದುವು ; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಪಾರಮಾರ್ಥಿಕ ದೃಷ್ಟಿಯಿಂದ ನೋಡಿದರೂ ವ್ರತ, ನಿಯಮ, ಭಗವಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವುದಕ್ಕೂ ಶಕ್ತಿಯು ಅತ್ಯಗತ್ಯವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತಮ್ಮ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯು ಇರಲೇಬೇಕು. ಮಾನವನಿಗ ಅದೊಂದು ಜೀವನದ ತತ್ವವಾದ ಶಕ್ತಿಯು ಯಾರಿಗೆ ಬೇಡ ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ ! ಸಂಗೀತಗಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶಾರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ ! ಹೆಚ್ಚೇಕೆ --ಮನುಷ್ಯ ಮಾತ್ರದವರಿಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಆವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯ ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪರಮೇಶ್ವರನೊಡನೆ ಯುದ್ಧಮಾಡಿ ಆತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಂಥಾದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯಮಾಡಿದುದೂ ಶಕ್ತಿಯೇ ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪುಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ ವಸ್ತುವನ್ನು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ವಜ್ರಕಾಯಸ್ಫುರದ್ರೂಪರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಶಿಸಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ಮೆಡಲುಗಳೂ, ಸರ್ಟಿಫಿಕೇಟುಗಳೂ ಬಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿಲ್ಲದ, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಅಮೋಘ ವನಸ್ಪತಿಗಳಿಂದ ತಯಾರಾದುದು. ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಆಹಾರ ಪಾನೀಯ ನಿಯಮವಾಗಲೀ, ಕಠಿಣ ಪಥ್ಯವಾಗಲಿ ಇಲ್ಲ ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು ; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡು ಬರುವುದು.

ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಆನಂದಿಸಿರಿ

ವಿವಿಧ ವಿಚಾರಗಳಿಂದ ವಿರಾಜಿಸುತ್ತದೆ.

ತಾತ್ಕಾಲಿಕ ಉಪಯುಕ್ತ ಮತ್ತು ದೀರ್ಘಹಿತದಾಯಕವಾದ
ಅನೇಕಾನೇಕ ವಿಷಯಗಳನ್ನೂ
ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ,
ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.
ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಕ್ಕೆ 1—0—0
(ಅಂಚೆವೆಚ್ಚ ಸೇ.) ಪರಸ್ಥಳಕ್ಕೆ 1—10—0 ಬಿಡಿಪ್ರತಿ ೩ ಪೈ

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭ ಧಾರ್ಜಿಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.

ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "ಶಕ್ತಿಸುಧೆ" ಯು ನವತೇಜಸ್ಸನ್ನೂ ಬಲಪುಷ್ಟಿ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "ಶಕ್ತಿಸುಧೆ" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"ಶಕ್ತಿಸುಧೆ" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದು. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ಕಂದುಕೊಡುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಬರುವ ಸೊಂಟನೋವು, ಹೊಟ್ಟೆನೋವು, ಅಕ್ರಮಸೂತಕವನ್ನೂ, ನಿಶ್ಯಕ್ತಿಯನ್ನೂ ಗುಣಪಡಿಸಿ ಅವರ ನೈಜವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳು ಪಾಠಗಳನ್ನ ಚೆನ್ನಾಗಿ ಕಲಿಯುವದಕ್ಕೂ, ಕಲಿತುದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವದಕ್ಕೂ "ಶಕ್ತಿಸುಧೆ" ಯು ವರಪ್ರಸಾದವು

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "ಶಕ್ತಿಸುಧೆ" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದಂಲ್ಲಿ ಅಮೃತಪ್ರಾಯವಾದ "ಶಕ್ತಿಸುಧೆ" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ಟ. ಖ ಬೇರೆ. ಚಿಕ್ಕ ಡಬ್ಬಿ 4 ಆಣೆ

ವಿಳಾಸ—ಶಕ್ತಿಸುಧಾ ಕಾರ್ಯಾಲಯ, ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು

Weekly Newspaper

SATYAVADI

Every Wednesday

MYSORE (Founded 1917) 1—4—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಬಿಸಿಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮ್ಮೇಲಾಗಲಿ

ದಣಿದ ದೇಹವನ್ನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ಪೆಮಗರ ಕೈಸೇರುವುದು.

ಅಪಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಬರೆಯಲ್ಪಟ್ಟ ವಿದ್ವತ್ತಾಪ್ರಚುರವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಪರಿಚಯ ಹಾಗು ಭಾವಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಾಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೫೫೦—೫೫೫ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಜಾಹೀರಾತುಗಾರರು ಬೇಗನೆ ತಮ್ಮ ತಮ್ಮ ಜಾಹೀರಾತುಗಳನ್ನು ಅಡ್ವಾನ್ಸ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ ಕೇಂದ್ರಗಳಲ್ಲಿ ಅದರ ಪ್ರಚಾರಕ್ಕಾಗಿ ಏಜೆಂಟರು ಬೇಕು.

ನೂರಕ್ಕೆ ೧೫ ೨೦ ವರೆಗೆ ಕಮಿಷನ್ ಕೊಡಲಾಗುವುದು ಹೊರ್ತಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿಪಾಜಿಟ್ ಹಣ ಪಡೆಯಲು ಸಮರ್ಥರಿರುವ ಜನರಷ್ಟೇ ಉತ್ತರಕ್ಕಾಗಿ ೧ ಆಣೆ ಸ್ಟ್ಯಾಂಪನ್ನಿಟ್ಟು ವಿಶೇಷ ಹಿತಿಗಾಗಿ ಬರೆದುಕೊಳ್ಳಬೇಕು.

ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

Sadhana Aushadalaya
Dacca (Bengal)

ಸಾಧನ ಔಷಧಾಲಯ, ಢಕ್ಕ

ಅಧ್ಯಕ್ಷರು--ಭಾಗಲ್ಪುರದ ಮಾಜಿ ರಸಾಯನ ಶಾಸ್ತ್ರ ಪಂಡಿತರಾಗಿದ್ದ ಮು॥ ಜೋಗೀಷಚಂದ್ರ ಘೋಸು ಎಂ. ಎ. ಎಫ್. ಸಿ ಎಸ್. ಲಂಡ್ಕ.

ಆಯುರ್ವೇದ ಶಾಸ್ತ್ರಕ್ಕೆ ಅನುಸಾರವಾಗಿ ಔಷಧಗಳು ತಯ್ತಾರಿಸಲ್ಪಡುತ್ತವೆ. ಕ್ವಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ವಿವರವನ್ನು ತಿಳಿಸಿದರೆ ಫಾರ್ಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

ಮಕರಧ್ವಜ—ಸಕಲ ರೋಗಗಳನ್ನೂ ನಿವಾರಿಸುತ್ತದೆ. ಸಂಪೂರ್ಣ ವಿಶ್ವಾದದ್ದು, ವಾತ, ಪಿತ್ತ, ಕಫವನ್ನು ಸಮಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಾಳ ರೂಪಾಯಿ.

ಸ್ತ್ರೀಬಾದಿಸರ್ದನ—ಪ್ರಮೇಹ, ಸವಾಯಿ ರೋಗಗಳಿಗೆ ಅಮೋಘ ಔಷಧವಾದ ರಸ ವಿಷವನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ, ರಕ್ತವನ್ನು ಶುದ್ಧಿಪಡಿಸುತ್ತದೆ. ಬೆಲೆ ಸೇರು ೩ ರೂಪಾಯಿ.

ಶುಕ್ರಸಂಜೀವಿನಿ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ಧಾತ ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧಕ ಔಷಧ ಬೆಲೆ ಸೇರು ೧೬ ರೂಪಾಯಿ.

ಅಬಾಲಾಂಧವಯೋಗ—ನಡುನೋವು, ಮುಟ್ಟುದೋಷ, ಒಂಜೆತನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ಹೊತ್ತಿಗೆ ೨ ರೂಪಾಯಿ, ಮತ್ತು ೫೦ ಹೊತ್ತಿಗೆ ೫ ರೂ.

H. S- KAMAL SHERIFF, DENTIST

Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

Oriental Pharmacy

Geueral Hospital Road

MYSORE

f0r

Best Unani Medicines